# ಸಾಹಿತಿ ಮಾಹಿತಿ ಕೋಶ

ಬಿ.ಜಿ. ಸತ್ಯಮೂರ್ತಿ



# ವ್ಯಕ್ತಿ ಪರಿಚಯ



## ರಂಗನಾಥ ಶರ್ಮಾ. ಎನ್.

| | | | |
|---|---|---|---|
| ೧. | ಹೆಸರು | : | ವಿದ್ವಾನ್ ಎನ್. ರಂಗನಾಥ ಶರ್ಮಾ. |
| ೨. | ಕಾವ್ಯನಾಮ | : | ಇರುವುದಿಲ್ಲ |
| ೩. | ಹುಟ್ಟಿದ ಸ್ಥಳ ದಿನಾಂಕ | : | ನಡಹಳ್ಳಿ, ಸೊರಬ, ೧೯೧೫. |
| ೪. | ಜಿಲ್ಲೆ – ರಾಜ್ಯ | : | ಶಿವಮೊಗ್ಗ, ಕರ್ನಾಟಕ. |
| ೫. | ವಿದ್ಯಾಭ್ಯಾಸ | : | |
| ೬. | ವೃತ್ತಿ | : | |
| ೭. | ಕೌಟುಂಬಿಕ | : | ಎರಡು ಗಂಡು, ಎರಡು ಹೆಣ್ಣು ಮಕ್ಕಳು. |
| ೮. | ಸದ್ಯದ ವಿಳಾಸ | : | ೧೨೬೧, ಧರಣಿ, ೧೩ನೇ ಕ್ರಾಸ್, ಗಿರಿನಗರ,<br>೨ನೇ ಹಂತ ಬೆಂಗಳೂರು |
| ೯. | ಖಾಯಂ ವಿಳಾಸ | : | ಮೇಲಿನಂತೆ |
| ೧೦. | ದೂರವಾಣಿ ಸಂಖ್ಯೆ | : | |
| ೧೧. | ಹಸ್ತಾಕ್ಷರ (ಸಹಿ) | : |  |

## ಸಾಹಿತ್ಯ ಪರಿಚಯ

ಇವರು ಶಿವಮೊಗ್ಗ ಜಿಲ್ಲೆಸೊರಬ ತಾಲೂಕು ನಡಹಳ್ಳಿಯಲ್ಲಿ ಜನಿಸಿದರು. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜ್ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ವ್ಯಾಕರಣ ವಿದ್ವಾಂಸ. ಅಲಂಕಾರ ಶಾಸ್ತ್ರ ವಿದ್ವಾನ್. ಖಾಸಗಿಯಾಗಿ ಮೈಸೂರು ಕನ್ನಡ ಪಂಡಿತ ಪರೀಕ್ಷೆ ಮಾಡಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿದ್ವಾನ್ ಮಾಡಿದ್ದಾರೆ. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರ ಬೋಧಕರಾಗಿ ವೃತ್ತಿ ಜೀವನ ಆರಂಭಿಸಿ ಪ್ರಾಧ್ಯಪಕರಾಗಿ ನಿವೃತ್ತರಾದರು. ಪ್ರವೃತ್ತಿಯಿಂದ ಸಾಹಿತಿಗಳು. ವಾಲ್ಮೀಕಿ ರಾಮಾಯಣ ಸಂಪೂರ್ಣ ಕಾಂಡಗಳನ್ನು ಮೂಲಸಹಿತವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಭಾಗವತದ ೧೦, ೧೧, ಹಾಗೂ ೧೨ನೇ ಸ್ಕಂದಗಳನ್ನು ಮೂಲ ಸಹಿತ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲಾಗಿದೆ. ಶ್ರೀ ಶಂಕರಚರಿತಾಮೃತ, ಬಾಹುಬಲಿ ವಿಜಯಂ, ಏಕಚಕ್ರಂಕಾವ್ಯೋದ್ಯಾನಂ, ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ವಿಷ್ಣು ಪುರಾಣ, ವಿದ್ಯಾರಣ್ಯರ ಶಂಕರ ದಿಗ್ವಿಜಯಗಳನ್ನು ಮೂಲ ಸಹಿತ ಕನ್ನಡಕ್ಕೆ ಅನುವಾದಿಸಿ ಪ್ರಕಟಸಲಾಗಿದೆ. ಇವರು ವ್ಯಾಕರಣ ಶಾಸ್ತ್ರದ ಪರಿವಾರ, ಮಾನವ ಧರ್ಮ ಶಾಸ್ತ್ರ ಮುಂತಾದ ಪ್ರೌಢ ಗ್ರಂಥಗಳೂ ಸಣ್ಣ ಪುಟ್ಟ ಗ್ರಂಥಗಳು ಸೇರಿ ಒಟ್ಟೂ ೬೨ ಗ್ರಂಥಗಳನ್ನು ಕನ್ನಡ ಹಾಗೂ ಸಂಸ್ಕೃತದಲ್ಲಿ ರಚಿಸಿದ್ದಾರೆ. ಸುಮಾರು ಮುನ್ನೂರಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಇವರ ವಿದ್ವತ್ತು, ಪಾಂಡಿತ್ಯಗಳನ್ನು ಗುರುತಿಸಿದ ತಿರುಪತಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ 'ಮಹಾ ಮಹೋಪಾಧ್ಯಾಯ'ಎಂಬ ಬಿರುದನ್ನು, ಬಿಹಾರದ ದಬಾಂಗ ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯ 'ವಿದ್ಯಾ ವಾಚಸ್ಪತಿ'ಎಂಬ ಬಿರುದನ್ನು, ಶ್ರೀ ಪೇಜಾವರ ಮಠದ ಶ್ರೀಗಳು 'ಪಂಡಿತ ರತ್ನಂ'ಎಂಬ ಬಿರುದನ್ನು ಹೀಗೆ ಇನ್ನೂ ಇಂತಹ ೧೫ಕ್ಕೂ ಹೆಚ್ಚು ಪ್ರಶಸ್ತಿ ಗೌರವಗಳು ಇವರಿಗೆ ಸಂದಿವೆ.

**ಪ್ರಕಟಿತ ಕೃತಿಗಳು:**

**ತಾತ್ಪರ್ಯ** – ತೈತ್ತರೀಯ ಪ್ರವಚನ, ಹರಿಭಕ್ತ ಸಾರ ಚರಿತ್ರೆ, ವೀರ ಕಂಪಣರಾಯ, ಶ್ರೀಧರ ಚರಿತ್ರೆ, ಯುಗಪುರುಷ ಶಂಕರ. **ವ್ಯಾಕರಣ** – ವ್ಯಾಕರಣ ಶಾಸ್ತ್ರದ ಪರಿವಾರ.
**ಪುರಾಣ** – ಪುರಾಣಗಳ ನೆಲೆ ಮತ್ತು ತತ್ವ ವಿಚಾರ. **ಕಥೆ** – ಗುರುಕುಲ ಕಥೆಗಳು, ಶ್ರೀರಾಮ ಕಥಾ ಮಂಜರಿ. **ಲೇ. ನ ಸಂ.** –ಪ್ರಜ್ಞಾ ರಂಗ. **ಕವಿ–ಕಾವ್ಯ** – ಎರಡನೇ ನಾಗವರ್ಮ.

**ಲಭಿಸಿರುವ ಪ್ರಶಸ್ತಿಗಳು:**

೧. ಸ್ವರ್ಣವಲ್ಲಿ ಶ್ರೀಗಳವರಿಂದ 'ಪಂಡಿತ ರಾಜ'ಗೌರವದ ಕರ್ನಾಟಕ ರಜ್ಯೋತ್ಸವ ಪ್ರಶಸ್ತಿ.
೨. ಅಧ್ಯಾಪಕ ವೃತ್ತಿಗಾಗಿ ರಾಷ್ಟ್ರ ಪ್ರಶಸ್ತಿ.
೩. ಸೇಡಿಯಾಪು ಪ್ರಶಸ್ತಿ.
೪. ದೇರಾಜೇ ಪ್ರಶಸ್ತಿ.
೫. ಕರ್ನಾಟಕ ಸರ್ಕಾರದ ಅನುವಾದ ಅಕಾಡೆಮಿ ಪ್ರಶಸ್ತಿ.
೬. ಶ್ರೀ ರಾಮಚಂದ್ರಾ ಪುರಮಠದ ಚಾತುರ್ಮಾಸ್ಯ ಪ್ರಶಸ್ತಿ.










ಸಾಹಿತಿಮಾಹಿತಿ ಕೋಶದ ರಚನೆ ತಾವು ಕೈಗೆತ್ತಿಕೊಂಡಿರುವ ಒಂದು ಅಸಾಧಾರಣ ಸಾಹಸವೇ ಆಗಿದೆ. ನಾಡು-ನುಡಿಯ ಸೇವೆ, ಅತಿ ವಿಶಿಷ್ಟ ರೀತಿಯಲ್ಲಿ, ತಮ್ಮಿಂದ ಈ ಕೃತಿ ಮಾಲೆಯ ಮೂಲಕ ನಡೆಯುತ್ತಿರುವುದು ಗಮನಾರ್ಹವಾಗಿದೆ.

– ಪ್ರೊ. ಹರಿನಾರಾಯಣ ಮಾಡಾವು, ಕೂರ್ನಡ್ಕ-ಕಿಮ್ಮಿಂಜೆ

ಈ ದುಬಾರಿ ಕಾಲದಲ್ಲೂ ತಾವು ಕೇವಲ ಸಣ್ಣ ಮೊತ್ತಕ್ಕೆ(ಅರ್ಧಬೆಲೆಗೆ) ಸಾಹಿತಿಮಾಹಿತಿ ಕೋಶ ಕಳಿಸಿದ್ದು ಶ್ಲಾಘನೀಯ. ಸಾಹಿತಿಗಳ ಮಾಹಿತಿ ಕಲೆಹಾಕುವ ಕುರಿತು ತಾವು ವಹಿಸಿರುವ ಕಾಳಜಿಗೆ ಅನಂತ ಧನ್ಯವಾದಗಳು. ತಮ್ಮ ಈ ಕೈಂಕರ್ಯ ನಿರಂತರಸಾಗಲಿ, ಇನ್ನೂ ಹೆಚ್ಚಿನ ಪ್ರತಿಫಲ ನೀಡಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

– ನಾಗರಾಜನಾಯ್ಕರ್, ಸಾಗರ




ತಾವು ಬಹುಶ್ರಮವಹಿಸಿ ಈ ಕಾರ್ಯವನ್ನು ನೆರವೇರಿಸಿದ್ದೀರಿ. ಇದೊಂದು Thanks less Job. ಆದರೂ ಮುಂದೆ ಸಾಹಿತ್ಯ ಚರಿತೆ, ಕವಿಚರಿತೆ ರಚಿಸುವವರು ತಮ್ಮ ಈ ಪ್ರಯತ್ನದಿಂದ ಉಪಕೃತರಾಗುತ್ತಾರೆ.

– ಡಾ. ರಾಮಚಂದ್ರಚಾರ್‌ಬೆಂಗಳೂರು




ತಾವು ಕನ್ನಡಪರ ಕೈಗೊಂಡಿರುವ ಸಾಹಿತ್ಯ ಚಟುವಟಿಕೆ ಮತ್ತು ಕಾಳಜಿ ಹರ್ಷ ತಂದಿದೆ. ನೀವು ಕೈಗೊಂಡಿರುವ ಈ ಕಾರ್ಯ ಯಶಸ್ವಿಯತ್ತ ದಾಪುಗಾಲು ಇಡಲಿ. ಕನ್ನಡದ ಕಂಪು ಎಲ್ಲೆಲ್ಲೂ ಹರಡಲಿ ಎಂದು ಹಾರೈಸುತ್ತೇನೆ.

– ಜಿ.ಬಿ. ಬಸವರಾಜ ಕಾಕನೂರು

ತಾವು ಶ್ರಮವಹಿಸಿ ಶ್ರದ್ಧೆಯಿಂದ ಸಾಹಿತಿ ಮಾಹಿತಿಕೋಶವನ್ನು ಬರೆಯುತ್ತಿದ್ದೀರಿ. ನಿಮ್ಮ ಪ್ರಯತ್ನಕ್ಕೆ ನನ್ನ ಅನಂತಾನಂತ ಧನ್ಯವಾದಗಳು ಮತ್ತು ನಮಸ್ಕಾರಗಳು.

– ಗಿರಿ ಭಟ್ಟ, ಕವಲಕ್ಕಿ




ಕನ್ನಡ ಸಾಹಿತ್ಯಕ್ಷೇತ್ರದ ಇಂದನ್ನು ನಾಳೆಗೂ ಪರಿಚಯಿಸುವ ದಿಶೆಯಲ್ಲಿ ಸಾಹಿತಿಮಾಹಿತಿ ಕೋಶವು ಒಂದು ಪ್ರಮಾಣಿಕ ಆಕರವೆನಿಸಲಿದೆ. ಇದೊಂದು ಒಳ್ಳೆಯ ಕ್ಷೇತ್ರಕಾರ್ಯ.

– ಯಲ್ಲಾಪುರ ಕೃಷ್ಣ ಶರ್ಮ,ಬೆಂಗಳೂರು

ತಾವು ಕೈಗೊಂಡ ಸಾಹಿತಿಮಾಹಿತಿ ಕೋಶ ಒಂದು ದಾಖಲೆಯಾಗುವುದರಿಂದ ತಮ್ಮ ಪ್ರಯತ್ನ ಸ್ತುತಿಸುವಂತದ್ದಾಗಿದೆ. ತಮಗೆ ವಂದನೆಗಳು.

– ಪ್ರೊ. ಎಲ್.ವಿ. ಪಾಟೀಲ, ಸಂಕೇಶ್ವರ




ತಮ್ಮ ಪ್ರಾಮಾಣಿಕ ಪ್ರಯತ್ನಕ್ಕೆ ಸರ್ವ ರೀತಿಯಲ್ಲೂ ಯಶಸ್ಸು ಕೋರುತ್ತೇನೆ.

– ಹೆಚ್.ಜಿ. ಸೀತಾರಾಮ, ಹಾರೋಕೊಪ್ಪ, ಕೆಳದಿ

ಸಾಹಿತಿ ಮಾಹಿತಿ ಪ್ರಸ್ತುತ – 6ನೇ ಭಾಗ ಸ್ವಲ್ಪ ಸ್ವಲ್ಪ – ಅಲ್ಲಿ ಇಲ್ಲಿ ನೋಡಿದ್ದೇನೆ. ನಿಮ್ಮದು ಸ್ತುತ್ಯಾರ್ಹ ಕೆಲಸವಾಗಿದೆ. ಕನ್ನಡ ಸಾಹಿತ್ಯ ಲೋಕದ ಪ್ರತಿಬಿಂಬ ಅದಾಗಿದೆ. ಒಂದೇ ಕಡೆಯಲ್ಲಿ ಸಾಹಿತಿಗಳ ಬಗ್ಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ಆ ಬಗ್ಗೆ ನಾನು ಸಾಹಿತಿಗಳ ವತಿಯಿಂದ ನಿಮಗೆ ಆಭಾರ ಸಲ್ಲಿಸುತ್ತಿದ್ದೇನೆ.

– ನಾರಾಯಣಭಟ್ಟ ಮತ್ತು ಡಾ. ಯಶೋದಾ ಭಟ್ಟ, ಆವನಿರಸಿಕರಂಗ ಪ್ರಕಾಶನ, ಧಾರವಾಡ





